ಪ್ರಮಾಣೀಕರಿಸಲಾದ ದಿನಾಂಕಃ- **10.12.2025.**

<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ. ಕೆ. ಪಿ. ಬಿ. ವಕೀಲರಿಂದಃ-</u>

ನಾನು 7 ನೇ ತರಗತಿ ಓದುತ್ತಿದ್ದೇನೆ. 2019 ರಿಂದ ಪೊನ್ನಪ್ಪ ಮತ್ತು ದೂರುದಾರರು ಪರಿಚಯ. ನಾನು ದೂರುದಾರರ ಮನೆಗೆ ಅವರ ಗಂಡ ತೀರಿಕೊಳ್ಳುವವರಗೊ ಹೋಗುತ್ತಿರಲಿಲ್ಲ, ದೂರುದಾರರೇ ನನ್ನ ಅಂಗಡಿಗೆ ಬರುತ್ತಿದ್ದರು. ಅವರ ಗಂಡನ ಕಾರ್ಯಕ್ಕೆ ಕರೆದಿದ್ದಕ್ಕೆ ಹೋಗಿದ್ದೆ. ಅವರ ಗಂಡ ತೀರಿಕೊಂಡ ನಂತರ ನಾನು ದೂರುದಾರರ ಸಂಪೂರ್ಣ ಮನೆ, ಬ್ಯಾಂಕ್ ಮತ್ತು ಕಚೇರಿ ಕೆಲಸಗಳನ್ನು ಮಾಡಿಕೊಂಡು ಅವರ ವಿಶ್ವಾಸ ಗಳಿಸಿದ್ದೆ ಎಂದರೆ ಸರಿಯಲ್ಲ. ನಿ ಪಿ 1(ಎ) ನನ್ನ ಸಹಿ. ನನಗೆ SBI ponnampet ಯಲ್ಲಿ ಬ್ಯಾಂಕ್ ಖಾತೆ ಇದೆ ಎಂದರೆ ಸರಿ. ನಿ ಪಿ 1 ನನ್ನ ಬ್ಯಾಂಕ್ ಖಾತೆಯ ಚೆಕ್ ಎಂದರೆ ಸರಿ. ನಾನು ನಿ ಪಿ 1 ಅನ್ನು ದೂರುದಾರರಿಗೆ ಕೊಟ್ಟಿರುವುದಿಲ್ಲ ಅವರ ಗಂಡ ಪೊನ್ನಪ್ಪನವರಿಗೆ ಕೊಟ್ಟಂತಹ ಚೆಕ್ ನಮ್ಮಿಬ್ಬರ ನಡುವೆ ಆಗಾಗ ಹಣಕಾಸಿನ ವ್ಯವಹಾರಗಳು ಕೊಡುವುದು ತೆಗೆದುಕೊಳ್ಳುವುದು ಆಗುತ್ತಿತ್ತು. ಹೀಗೆ 20, 30 ಸಾವಿರ ಹಣಕಾಸಿನ ವ್ಯವಹಾರ ನನ್ನ ಮತ್ತು ಪೊನ್ನಪ್ಪನವರ ಆಗುತ್ತಿತ್ತು. ಆಗ ಆ ಹಣಕಾಸಿನ ವ್ಯವಹಾರಕ್ಕೆಂದು ಪೊನ್ನಪ್ಪನವರಿಗೆ ಕೊಟ್ಟಂತಹ ನಿ ಪಿ 1 ಚೆಕ್ ಆಗಿರುತ್ತದೆ. ನಿ ಪಿ 4 ನೋಟೀಸ್ ದೂರುದಾರರ ಕೊಟ್ಟಿದ್ದು ನನಗೆ ಜಾರಿಯಾಗಿದೆ ಎಂದರೆ ಸರಿ. ನಾನು ಇದಕ್ಕೆ ಉತ್ತರ ಕೊಟ್ಟಿದ್ದೇನೆ. ನಾನು ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿ ಪಿ 9 ರಲ್ಲಿ ಸಾಕ್ಷಿ ಅವರ ಸಹಿ ನೋಡಿ ಗುರುತಿಸಿರುತ್ತಾರೆ. ನಿ ಪಿ 9 ರಲ್ಲಿ ಬರೆದುಕೊಂಡಿರುವಂತೆ ನಾನು ಒಪ್ಪುವುದಿಲ್ಲ, ಖಾಲಿ ಪತ್ರಕ್ಕೆ ಸಹಿ ಮಾಡಿಕೊಂಡಿದ್ದರು. ನಿ ಪಿ 9 ರಲ್ಲಿ ವಿವರಗಳನ್ನು ತಿಳಿದುಕೊಂಡ ನಂತರ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 9 ಛಾಪಾ ಕಾಗದ ಖರೀದಿಸಬೇಕೆಂದು ನನ್ನಿಂದ ರೂ. 10 ಸಾವಿರಹಣ ಪಡೆದು ಆ ಖಾಲಿ ದಾಖಲೆಗೆ ಸಹಿ ಹಾಕಿಸಿಕೊಂಡಿರುತ್ತಾರೆ. ನಿ ಪಿ 9 ದಾಖಲೆಯಲ್ಲಿ ಬರೆದಿರುವಂತೆ ಕಂತುಗಳಲ್ಲಿ ನಾನು ಸಾಲ ತೀರಿಸುವುದಾಗಿ ಒಪ್ಪಿದ್ದೆ ಎಂದರೆ ಸರಿಯಲ್ಲ.

2020 ರಲ್ಲಿ ದೂರುದಾರರ ಭಾವ ಪೂಣಚ್ಚರವರು ನನ್ನ ವಿರುದ್ಧ ನನ್ನ ಅಂಗಡಿಯಲ್ಲಿ ಮತ್ತು ಇನ್ನಿಬ್ಬರ ವ್ಯಕ್ತಿಗಳ ಜೊತೆ ಹಣ ಕೊಡಬೇಕು ಎಂದು ಕೇಳಿ ಗಲಾಟೆ ಮಾಡಿರುತ್ತಾರೆ ಮತ್ತು 5 ಪೊ. ಠಾಣೆಗಳಲ್ಲಿ ಸುಳ್ಳು ದೂರು ಕೊಟ್ಟಿರುತ್ತಾರೆ. ಅವರು ಕೊಟ್ಟ ದೂರಿನಂತೆ ವೃತ್ತ ನಿರೀಕ್ಷಕರ ಕಚೇರಿ ಗೋಣಿಕೊಪ್ಪಕ್ಕೆ ಕರೆಸಿರುತ್ತಾರೆ. ನಿ ಡಿ 2 ರಲ್ಲಿ ಸಹಿ ನೋಡಿ ಗುರುತಿಸಿರುತ್ತಾರೆ. ಠಾಣೆಯಲ್ಲಿ ನಿ ಡಿ 2 ಬರೆದುಕೊಂಡರು, ಆದರೆ ಅದರಲ್ಲಿ ಏನು ಬರೆದುಕೊಟ್ಟರು ಎಂದು ನನಗೆ ಹೇಳಲಿಲ್ಲ, ಆದರೆ ಸಹಿ ಪಡೆದರು. ನಿ ಡಿ 2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದು ಪೊಲೀಸರು ಓದಿ ಹೇಳಿದ್ದು, ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬೆಳ್ಳೂರು ಗ್ರಾಮದಲ್ಲಿ ದೂರುದಾರರ ಗಂಡನಿಗೆ ಕಾಫಿ ತೋಟ ಇದೆ ಎಂದರೆ ನನಗೆ ಗೊತ್ತಿಲ್ಲ. ಪೊನ್ನಂಪೇಟೆ ಹುದಿಕೇರಿಯಲ್ಲಿ ದೂರುದಾರರಿಗೆ ಸೇರಿರುವ ಬಾಡಿಗೆಗೆ ಕೊಟ್ಟಿರುವ ಮನೆ ಇದೆ. 2013-2014 ರಿಂದ ನಾನು ಬಟ್ಟೆ ವ್ಯಾಪಾರ ಮಾಡುತ್ತಿದ್ದೇನೆ. ನನಗೆ ಆಗಲೂ 2 ಅಂಗಡಿಗಳು ಇದ್ದು, ಈಗಲೂ 2 ಅಂಗಡಿಗಳು ಬೇರೆ ಸ್ಥಳದಲ್ಲಿದೆ. ಅಂಗಡಿ ಹಾಕಲು ಬ್ಯಾಂಕ್ ನಲ್ಲಿ ಸಾಲ ಪಡೆದು ಶುರುಮಾಡಿರುತ್ತೇನೆ. ದಿ. 10.07.2019 ರಂದು ದೂರುದಾರರ ಮನೆಗೆ ಹೋಗಿ ರೂ. 20 ಲಕ್ಷ ಹಣ ನನ್ನ ವ್ಯಾಪಾರ ಅಭಿವೃದ್ದಿಗೆ ಕೇಳಿರುವುದಿಲ್ಲ. ದೂರುದಾರರ ರೂ. 20 ಲಕ್ಷ ನಗದು ಹಣ ಕೇಳಿದ್ದಕ್ಕೆ ಕೊಟ್ಟಿದ್ದು, 4 ತಿಂಗಳ ಹಿಂದೆ ತೀರಿಸುವುದಾಗಿ ಹೇಳಿದ್ದೆ ಎಂದರೆ ಸರಿಯಲ್ಲ. ನಾನು ದೂರುದಾರರ ಆಭರಣಗಳನ್ನು ಗಿರಿವಿ ಇಟ್ಟು ಸಾಲ ಪಡೆದಿರುವುದಿಲ್ಲ, ಅವರ ಮನೆಯಲ್ಲಿ ಕೆಲಸಕ್ಕೆ ಇದ್ದ ಕವಿತಾ ಅವರ ಹತ್ತಿರ ಚಿನ್ನವಿದ್ದು, ದೂರುದಾರರು ಮತ್ತು ಅವರ ಗಂಡನ ನಡುವೆ ಇದ್ದ ಆಸ್ತಿಗಳು ಹರಾಜಿಗೆ ಬಂದಾಗ ಅವರ ಆಭರಣಗಳನ್ನು ನನ್ನ ಹೆಸರಿಗೆ Federal Bank ನವರು ಮಾಡಿಕೊಟ್ಟರು, ನಂತರ ನಾನು ಇದೇ ಆಭರಣಗಳನ್ನು ದೂರುದಾರರ ಮಗಳು ಶ್ರೇಯಾ ಹೆಸರಿಗೆ ಮಾಡಿಕೊಟ್ಟಿದ್ದೇನೆ, ಅದಕ್ಕೆ ದಾಖಲೆ ಇದೆ. ಈ Federal Bank ದಾಖಲೆಗಳನ್ನು ಕೊಟ್ಟಿಲ್ಲ.

ದಿ. 05.12.2021 ರಂದು ದೂರುದಾರರು ನನ್ನ ಅಂಗಡಿಗೆ ದುಡ್ಡು ಕೇಳಲು ಬಂದಿರುವುದಿಲ್ಲ, ಬಟ್ಟೆ ಖರೀದಿಸಲು ಮತ್ತು ಮನಸ್ತಾಪ ಬೇಡ ಎಂದು ಹೇಳಲು ಬಂದಿದ್ದರು. ರೂ. 20 ಲಕ್ಷಹಣ ವಾಪಸ್ ಕೊಡದೇ ಇದಿದ್ದಕ್ಕೆ ಆದಿನ ಅದನ್ನು ಕೇಳಲು ನನ್ನ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ಆಗ ನಿ ಪಿ 1 ಚೆಕ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಹಣ ಇದೆ ಎಂದು ನಿ ಪಿ 1 ಚೆಕ್ ಕೊಟ್ಟಿರುವುದಿಲ್ಲ ಸಂಘದಲ್ಲಿ ಸಾಲ ಮಾಡುವಾಗ ಕೊಟ್ಟಂತಹ ಚೆಕ್ ಆಗಿದ್ದು ಅದು ಅಮಾನ್ಯವಾಗಲು ನಾನು ಕಾರಣ ಅಲ್ಲ. ನನ್ನ ಖಾತೆಯಲ್ಲೂ ಅಷ್ಟು ಹಣ ಇರಲಿಲ್ಲ. ದೂರುದಾರರನ್ನು ನಂಬಿಸಿ ಹಣ ಪಡೆದು ವಾಪಸ್ ಮಾಡದೇ ವಂಚಿಸಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಚೆಕ್ ಹಣ ಕೊಡಲು ಬಾಧ್ಯಸ್ಥಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ